೪೯೬ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿಲಾದ ವಿಷಯ

ವಿಷಯ : ಕುಷ್ಟಗಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ.

* ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಕುಷ್ಟಗಿಯಲ್ಲಿ ನಡೆದಂತಹ ಸಾಮೂಹಿಕ ಅತ್ಯಾಚಾರದ ಬಗ್ಗೆ ಸರ್ಕಾರದವರು ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಮೊನ್ನೆ ಶಾಂತಿಯುತವಾದಂತಹ ಬಂದ್ ನಡೆದಂತಹ ಸಂದರ್ಭದಲ್ಲಿಯೂ ಪೋಲೀಸ್‌ನವರೆ ಶಾಂತಿಯುತವಾದಂತಹ ಜನರಿಗೆ ಹಲ್ಲೆಯನ್ನು ಮಾಡಿದ್ದಾರೆ. ಇದುವರೆವಿಗೂ 4 ಜನ ಅಪರಾಧಿಗಳನ್ನು ಬಂಧಿಸಿಲ್ಲ. ಕೆ.ಎಂ.ಸಿ.ಯಲ್ಲಿ ಆಗಿರುವುದು ಸಂಯುಕ್ತ ಕರ್ನಾಟಕದ ಪತ್ರಿಕೆಯಲ್ಲಿ ವರದಿ ಬಂದಿದೆ. ಪೋಲೀಸಿನವರು ಇದಕ್ಕೆ ಶಾಮೀಲಾಗಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಯಾರನ್ನೂ ಅರೆಸ್ಟ್ ಮಾಡಿಲ್ಲ. ಅಲ್ಲಿರುವಂತಹ 4 ಜನ ಅಪರಾಧಿಗಳನ್ನು ಅರೆಸ್ಟ್ ಮಾಡಿಲ್ಲ. ಇದನ್ನು ನಾವು ಪ್ರತಿಭಟನೆ ಮಾಡಿ ನಮ್ಮ ಧರಣಿಯನ್ನು ಮುಂದುವರಿಸುತ್ತಿದ್ದೇವೆ. ತಾವು ಹೇಗೆ ಮಾಡುತ್ತೀರೋ, ಸರ್ಕಾರಕ್ಕೆ ಇದರ ಬಗ್ಗೆ ಯಾವ ರೀತಿ ಛೀಮಾರಿ ಮಾಡುತ್ತೀರೋ ಅದು ನಿಮಗೆ ಬಿಟ್ಟಿದ್ದುದು.

* ಶ್ರೀ ಪಿ .ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾವು ಕೆಲವು ವಿಚಾರಗಳನ್ನು ಹೇಳುವುದು ಇದೆ. ತಮ್ಮ ಜೊತೆಯಲ್ಲಿ ನಾವು ಈಗಾಗಲೇ ಸಮಾಲೋಚನೆಯನ್ನು ಮಾಡಿದ್ದೇವೆ. ಪ್ರಶ್ನೋತ್ತರ ವೇಳೆಯ ನಂತರ ತಾವು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಿಮ್ಮಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ನಿಮಗೆ ಪ್ರಶ್ನೋತ್ತರ ಕಾಲ ಮುಗಿದ ನಂತರ ಅವಕಾಶವನ್ನು ಮಾಡಿಕೊಡುತ್ತೇನೆ. ತಾವು ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ, ಪ್ರಶ್ನೋತ್ತರ ವೇಳೆಯನ್ನು ನಡೆಸಲು ಆಸ್ಪದ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರ ಮನವಿಯ ಮೇರೆಗೆ ಧರಣಿ ಕುಳಿತಿದ್ದ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ : ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯ ಮತ್ತು ಘಟಕಗಳಿಗೆ ಸೌಲಭ್ಯ.

Q : 1447

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಯ ಮತ್ತು ಪಾಲನೆ ಘಟಕ ಕಛೇರಿಗಳ ಸಂಖ್ಯೆ ;

ಆ) ಬೆಂಗಳೂರು ನಗರದಲ್ಲಿರುವ ಈ ಎಲ್ಲಾ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯ ಮತ್ತು ಪಾಲನೆ ಘಟಕ ಕಛೇರಿಗಳಿಗೆ ಪ್ರತ್ಯೇಕ ದೂರವಾಣಿ (ಅಂಡ್ ಟಿ)ಯನ್ನು ಒದಗಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ, ದೂರವಾಣಿ ಅನುಕೂಲ ಇಲ್ಲದೇ, ಸಾರ್ವಜನಿಕರಿಗೆ ತಮ್ಮ ದೂರುಗಳನ್ನು ಕಾರ್ಯ ಮತ್ತು ಪಾಲನೆ ಘಟಕ ಕಛೇರಿಗಳಿಗೆ ನೀಡುವಲ್ಲಿ ಬಹಳ ತೊಂದರೆಯಾಗುತ್ತಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯ ಮತ್ತು ಪಾಲನೆಯ ಘಟಕ ಕಛೇರಿಗಳಿಗೆ ಪ್ರತ್ಯೇಕ ಪಿ ಅಂಡ್ ಟಿ ದೂರವಾಣಿ ಸಂಪರ್ಕವನ್ನು ನೀಡುವಲ್ಲಿ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಎಸ್.ಎಂ.ಕೃಷ್ಣ ( ಉಪಮುಖ್ಯಮಂತ್ರಿಗಳು ) :

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ 89 ಕಾರ್ಯ ಮತ್ತು ಪಾಲನೆ ಘಟಕ ಕಛೇರಿಗಳಿವೆ.

ಆ) ಇಲ್ಲ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನಗರದಲ್ಲಿರುವ ತನ್ನ ಎಲ್ಲಾ ಕಾರ್ಯ ಮತ್ತು ಪಾಲನೆ ಉಪ ವಿಭಾಗಗಳ ಕಛೇರಿಗಳಿಗೆ ಮತ್ತು ತನ್ನ ಎಲ್ಲಾ ಸೇವಾ ಕೇಂದ್ರಗಳಿಗೆ ಹಾಗೂ ಕೇಂದ್ರ ದೂರು ಸ್ವೀಕಾರ ಕೇಂದ್ರಕ್ಕೆ ಪಿ ಅಂಡ್ ಟಿ ದೂರವಾಣಿ ಸಂಪರ್ಕವನ್ನು ಸಾರ್ವಜನಿಕರು ತಮ್ಮ ದೂರುಗಳನ್ನು ನೀಡಲು ಒದಗಿಸಿರುವುದರಿಂದ ಕಾರ್ಯ ಮತ್ತು ಪಾಲನೆ ಘಟಕ ಕಛೇರಿಗಳಿಗೆ ಪಿ ಅಂಡ್ ಟಿ ದೂರವಾಣಿ ಸಂಪರ್ಕವನ್ನು ಒದಗಿಸುವ ಅವಶ್ಯಕತೆ ಇರುವುದಿಲ್ಲ.

ಬೆಂಗಳೂರು ನಗರದಲ್ಲಿ ಕಾರ್ಯ ಮತ್ತು ಪಾಲನೆ ವಿಭಾಗ- ಉಪ ವಿಭಾಗಗಳ ಉಸ್ತುವಾರಿ ನೋಡಿಕೊಳ್ಳುವ ಕಾರ್ಯನಿರ್ವಾಹಕ ಇಂಜಿನಿಯರುಗಳ ನಿವಾಸಗಳಿಗೆ, ಕಛೇರಿ ವೇಳೆಗಳ ನಂತರ ಸಾರ್ವಜನಿಕರು ಇವರನ್ನು ಸಂಪರ್ಕಿಸುವುದಕ್ಕಾಗಿ ಪಿ ಅಂಡ್ ಟಿ ದೂರವಾಣಿ ಸಂಪರ್ಕವನ್ನು ಒದಗಿಸಲಾಗಿದೆ. ಬೆಂಗಳೂರು ನಗರದ ಗ್ರಾಹಕರ ಅನುಕೂಲಕ್ಕಾಗಿ ಎಲ್ಲಾ ಪ್ರಮುಖ ದಿನಪತ್ರಿಕೆಗಳಲ್ಲಿ ಪಿ ಅಂಡ್ ಟಿ ದೂರವಾಣಿ ಸಂಖ್ಯೆಗಳನ್ನು ಪ್ರಕಟಿಸಲಾಗಿದೆ.

ಈ) ಪ್ರಶ್ನೆಯ 'ಇ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಎಂ. ಮುನಿಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಕೂಡ ಈ ಉತ್ತರದಲ್ಲಿ ಹಿಂದೆ ಇಂಡಿಪೆಂಡರೆಟ್ ದೂರವಾಣಿಗಳು ಪ್ರತಿಯೊಂದು ಆಫೀನಲ್ಲಿಯೂ ಇದ್ದು, ಅದರಿಂದ ಜನರಿಗೆ ಬಹಳವಾಗಿ ಒಂದು ರೀತಿಯಲ್ಲಿ ಉಪಯೋಗವಾಗಿತ್ತು. ಈಗ ಸೆಂಟ್ರಲ್ ಟೆಲಿಫೋನ್ ಅನ್ನು ಒದಗಿಸಿದ್ದೀರಿ. ಆದರಿಂದ ಜನ ಸೆಂಟ್ರಲ್ ಎಕ್ಸ್‌ಚೇಂಜ್‌ಗೆ ಟೆಲಿಫೋನ್ ಮಾಡಿ ಅಲ್ಲಿಂದ ಉತ್ತರವನ್ನು

ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ, ದಯಮಾಡಿ ಇಂಡಿಪೆಂಡೆಂಟ್ ಟೆಲಿಫೋನ್ O & M ಯೂನಿಟ್‌ಗಳಿಗೆ ಕೊಟ್ಟರೆ ಒಳ್ಳೆಯದಾಗುತ್ತದೆಂದು ನಾನು ಭಾವಿಸುತ್ತೇನೆ. ಇಂಜಿನಿಯರ್‌ಗಳ ಮನೆಗಳಿಗೆ ಕೊಟ್ಟಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ಎಷ್ಟು ಜನ ಇಂಜಿನಿಯರ್ ಮನೆಗಳಿಗೆ ಟೆಲಿಫೋನ್ ಗೊತ್ತಿದೆ ಎಂದು ತಾವು ಊಹಿಸಿಕೊಳ್ಳಬಹುದು. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ದಯಮಾಡಿ ಪಿ ಅಂಡ್ ಟಿ ಟೆಲಿಫೋನ್ ಅನ್ನು ಪ್ರತಿಯೊಂದು O & M ಸ್ಟೇಷನ್‌ಗೆ ಕೊಟ್ಟರೆ ಒಳ್ಳೆಯದು ಎನ್ನುವುದು ನನ್ನ ಅನಿಸಿಕೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಮುನಿಸ್ವಾಮಿಯವರು ಸೂಚನೆ ಮಾಡಿರತಕ್ಕಂಥದ್ದು ಬಹಳ ಸೂಕ್ತವಾಗಿದೆ. ಗ್ರಾಹಕರುಗಳ ದೂರುಗಳನ್ನು ನಾವು ವಿದ್ಯುಚ್ಛಕ್ತಿ ಇಲಾಖೆಗೆ ತಲುಪಿಸುವುದಕ್ಕೆ ಯೋಗ್ಯವಾದಂಥ ಏರ್ಪಾಡುಗಳನ್ನು ಮಾಡಬೇಕಾಗಿರತಕ್ಕಂಥದ್ದು ವಿದ್ಯುಚ್ಛಕ್ತಿ ಮಂಡಳಿಯ ಕರ್ತವ್ಯ. ಆದ್ದರಿಂದ ತಮ್ಮ ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಈ ಸಾರ್ವಜನಿಕ ಸಂಪರ್ಕ ಇನ್ನೂ ಹೆಚ್ಚು ನಡೆಯತಕ್ಕಂಥ ರೀತಿ ಏರ್ಪಾಡನ್ನು ಮಾಡುತ್ತೇನೆ.

ವಿಷಯ : ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಳೆದ ಮೂರು ತಿಂಗಳುಗಳಿಂದ ತೀವ್ರ ವಿದ್ಯುತ್ ಕೊರತೆ.

Q : 1723

ಶ್ರೀ ಸಾದರ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಳೆದ ಮೂರು ತಿಂಗಳಿಂದ ತೀವ್ರ ವಿದ್ಯುತ್ ಕೊರತೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚನ್ನಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ವೋಲ್ಟೇಜ್ ಸ್ಥಿತಿ ತಪ್ಪಿಸಲು ಮತ್ತೊಂದು 12.5 ಎಂ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ಸರ್ಕಾರವು ಕೈಗೊಂಡಿರುವ ಕ್ರಮ ;

ಇ) ಹಾಗಿದ್ದಲ್ಲಿ, ಯಾವಾಗ ಅದನ್ನು ಸ್ಥಾಪಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು.

ಆ) ಎರಡನೇ 8 ಎಂ.ವಿ.ಎ. 66 : 11 ಕೆವಿ ವಿದ್ಯುತ್ ಟ್ರಾನ್ಸ್‌ಫಾರ್ಮರನ್ನು ಬದಲಾಯಿಸಿ ಅಲ್ಲಿ 12.5 ಎಂ.ವಿ.ಎ. 66 : 11 ಕೆವಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಾಪಿಸುವುದನ್ನು ಮುಂಬರುವ 1993-94ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ.

ಇ) ತಯಾರಿಕೆದಾರರಿಂದ 12.5 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಲಭ್ಯತೆಯನ್ನು